ನೊಂದಣಿ ಸಂಖ್ಯೆ : ಯುಬಿಸಿ-3/98/ನೊಂದಣಿ/34547/2004- ದಿ.06-11-2004

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.

ನಂ. 16, 1ನೇ ಮಹಡಿ, 1ನೇ ಅಡ್ಡ ರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

**KARNATAKA STATE CO-OPERATIVE CREDIT SOCIETIES FEDERATION LTD**

No. 16, 1st Floor, 1st Cross, Linkroad, Malleshwaram, Bangalore - 560 003.
Phone : 080-23564444/23464033 E-Mail : ksccsfltd@gmail.com

ಸಿ.ಎಂ.ಮಾರೇಗೌಡ
ಅಧ್ಯಕ್ಷರು

ಡಾ|| ಸಂಜಯ ಪಿ ಹೊಸಮಠ
ಉಪಾಧ್ಯಕ್ಷರು

ನಿರ್ದೇಶಕರು

ವಿ.ರಾಜು
ಶಿವರಾಜ ಬಿ ಪಾಟೀಲ್
ಬಿ.ಡಿ.ಭೂಕಾಂತ್,
ಎಂ.ಜೆ.ನರೇಂದ್ರಕುಮಾರ
ಗುರುರಾಜ ಹುಣಸಿಮರದ
ಕೆ.ಎಲ್.ಶಿವರಾಮು
ಕೆ.ಲಲಿತ
ಡಿ.ಚನ್ನಯ್ಯ
ಕೆ.ಕೃಷ್ಣಮೂರ್ತಿ
ಎನ್.ಜಿ.ರವೀಶಯ್ಯ
ಕೆ.ಕೆ.ಮಹೇಂದ್ರಪ್ರಸಾದ್ ಗೌಡ
ಜಿ.ಮಲ್ಲಿಕಾರ್ಜುನಯ್ಯ
ತಮ್ಮಣ್ಣ ಬಾಲಪ್ಪ ಕೆಂಚರೆಡ್ಡಿ
ಧರೇಪ್ಪ ಎಂ.ಅಲಗೂರ
ಗುರುಪಾದಪ್ಪಗೌಡ ಬಿ.ಪಾಟೀಲ
ಹೊನ್ನಯ್ಯ ವಿ ಹಿರೇಮಠ
ಆಕಾಶ್ ಪಾಟೀಲ್
ಡಿ.ಕೆ. ಜಯಕೃಷ್ಣೇಗೌಡ
ಮುಖ್ಯಕಾರ್ಯನಿರ್ವಹಣಾಧಿಕಾರಿ
ಕೆ. ಎಸ್. ಗುರುಪ್ರಸಾದ್

ಉಲ್ಲೇಖ : ಕರಾಸಪಸಂಮ/2232 /20 17-20 18 ದಿನಾಂಕ : 28/11/2017

Credit Societies Federation Ltd Bangalore Karnataka State Co-Operative

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕ ಆಯುಕ್ತರು,
8ನೇ ಮಹಡಿ, ಕಂದಾಯ ಭವನ,
ಕೆಂಪೇಗೌಡ ರಸ್ತೆ, ಬೆಂಗಳೂರು-560009

ಮಾನ್ಯರೇ,

ವಿಷಯ:-ಮಹಾಮಂಡಳದಿಂದ ಇ-ಸ್ಟಾಂಪಿಂಗ್ ಉಪಕೇಂದ್ರಗಳನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ ಉಪಕೇಂದ್ರಗಳು ಮುದ್ರಿಸುವ ಇ-ಸ್ಟಾಂಪಿಂಗ್ ಪೇಪರ್‌ಗಳ ಸೇವಾಶುಲ್ಕವನ್ನು ಹೆಚ್ಚಿಸುವ ಬಗ್ಗೆ.

ಉಲ್ಲೇಖ1:-ಆಡಳಿತಮಂಡಳಿ ಸಭೆಯ ದಿನಾಂಕ:25.03.2017 ನಿರ್ಣಯ ಸಂಖ್ಯೆ:11ರಂತೆ.

ಉಲ್ಲೇಖ 2:-ಮಹಾಮಂಡಳವು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ರವರಿಗೆ ಸೇವಾ ಶುಲ್ಕ ಹೆಚ್ಚಿಸುವಂತೆ ಕೋರಿ ಬರೆದಿರುವ ಪತ್ರಗಳು ದಿನಾಂಕ:29.05.2017 ಹಾಗೂ 02.08.2017

---

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರುರವರೊಡನೆ ಒಪ್ಪಂದ ಮಾಡಿಕೊಂಡು ಪತ್ತಿನ ಹಾಗೂ ಇತರೇ ಸಹಕಾರ ಸಂಘಗಳಿಗೆ 1000ಕ್ಕೂ ಹೆಚ್ಚಿನ ಇ-ಸ್ಟಾಂಪಿಂಗ್ ಉಪಕೇಂದ್ರಗಳನ್ನು ಮಂಜೂರು ಮಾಡಿಸಿಕೊಟ್ಟಿದೆ. 2011ರಿಂದ ತಹಲ್‌ವರೆವಿಗೆ ಈ ಇ-ಸ್ಟಾಂಪಿಂಗ್ ಕೇಂದ್ರಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರ ಸಂಘಗಳು ಸರಾಸರಿ ದಿನಕ್ಕೆ 28000 ಇ-ಸ್ಟಾಂಪಿಂಗ್ ಪೇಪರ್‌ಗಳನ್ನು ಮುದ್ರಿಸುತ್ತಿವೆ. ಈ ಸಂಘಗಳಿಗೆ ರೂ.20/-ರಿಂದ ರೂ.100/-ರವರೆಗಿನ ಇ-ಸ್ಟಾಂಪಿಂಗ್ ಪೇಪರ್‌ಗಳಿಗೆ ರೂ.10/-ರಂತೆ ಹಾಗೂ 101/-ರಿಂದ 5000/-ರೂ.ಗಳ ಇ-ಸ್ಟಾಂಪ್ ಪೇಪರ್‌ಗಳಿಗೆ ರೂ.15/-ರಂತೆ ಸೇವಾಶುಲ್ಕ ಪಡೆಯಲು ಅವಕಾಶವಿರುತ್ತದೆ. ಈ ಸೇವಾಶುಲ್ಕವು 2011ರಲ್ಲಿ ನಿರ್ಧರಿತವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಇ-ಸ್ಟಾಂಪಿಂಗ್ ಮುದ್ರಿಸುವ ಪೇಪರ್‌ನ ಬೆಲೆ ತೀರಾ ಹೆಚ್ಚಳವಾಗಿರುತ್ತದೆ. ಹಾಗೂ ಕಂಪ್ಯೂಟರ್‌ಗಳಿಗೆ ಬಳಸುವ ಕಾಟ್ರಿಡ್ಜ್ ಬೆಲೆ ಕೂಡ ತುಂಬಾ ದುಬಾರಿಯಾಗಿರುತ್ತದೆ. ಅಲ್ಲದೆ ಇಂಟರ್‌ನೆಟ್, ಬಾಡಿಗೆ ಮತ್ತಿತರ ವೆಚ್ಚಗಳು ತುಂಬಾ ದುಬಾರಿಯಾಗಿದ್ದು ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ. ಇ-ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣೆ ಕಷ್ಟಕರವಾಗಿರುವುದರಿಂದ ಹೆಚ್ಚಿನ ಸೇವಾಶುಲ್ಕವನ್ನು

ಮಂಜೂರು ಮಾಡಿಸಿಕೊಡುವಂತೆ ಮಹಾಮಂಡಳಕ್ಕೆ ಹಲವಾರು ಸಹಕಾರ ಸಂಘಗಳ ಪದಾಧಿಕಾರಿಗಳು ಮನವಿ ಮಾಡಿಕೊಂಡಿರುತ್ತಾರೆ.

ದಿನಾಂಕ:25.03.2017 ರಂದು ನಡೆದ ಮಹಾಮಂಡಳದ ಆಡಳಿತಮಂಡಳಿ ಸಭೆಯ ನಿರ್ಣಯ 11ರ ಪ್ರಕಾರ ಈ ಸಹಕಾರ ಸಂಘಗಳ ಮನವಿಯನ್ನು ಪರಿಗಣಿಸಿ ಹಾಲಿ ಪಡೆಯುತ್ತಿರುವ ಸೇವಾಶುಲ್ಕ ರೂ.10/-ಗಳಿಂದ ರೂ.20/-ಗಳಿಗೆ ಹಾಗೂ ರೂ.15/-ಗಳಿಂದ ರೂ.25/-ಗಳಿಗೆ ಹೆಚ್ಚಿಸುವಂತೆ ತಮ್ಮನ್ನು ಕೋರಲು ನಿರ್ಣಯ ಮಾಡಲಾಗಿದೆ. ಆದ್ದರಿಂದ ಈ ಸಹಕಾರ ಸಂಘಗಳು ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಗುಣಮಟ್ಟದ ಸೇವೆ ನೀಡಲು ಅನುವಾಗುವಂತೆ ಮೇಲ್ಕಂಡಂತೆ ಸೇವಾಶುಲ್ಕವನ್ನು ಹೆಚ್ಚಿಸಲು ದಿ:29.05.2017ರಂದು ಹಾಗೂ ದಿ:02.08.2017 ರಂದು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ರವರಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಆದರೆ ಇದುವರೆವಿಗೆ ಈ ಕುರಿತಂತೆ ಯಾವುದೇ ಕ್ರಮವಾಗಿರುವುದಿಲ್ಲ. ತಾವು ಶೀಘ್ರವಾಗಿ ಈ ಬಗ್ಗೆ ಕ್ರಮವಿಟ್ಟು ಸೇವಾಶುಲ್ಕವನ್ನು ಹೆಚ್ಚಿಸಿ ಆದೇಶ ಹೊರಡಿಸಬೇಕಾಗಿ ಮತ್ತೊಮ್ಮೆ ಕೋರುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಸಿ.ಎಂ.ಮಾರೇಗೌಡ)
ಅಧ್ಯಕ್ಷರು